ಈವರೆಗೆ ಯೂಟ್ಯೂಬ್‌ನ ಸಂಚಿಯಲ್ಲೆಲ್ಲೋ ಬೆಚ್ಚಗಿದ್ದ ಮಹದೇವಸ್ವಾಮಿ ಅವರ ಹಾಡು ಮತ್ತು ಸಂದರ್ಶನಗಳು ಒಮ್ಮಿಂದೊಮ್ಮೆಗೇ ಲಕ್ಷ ಲಕ್ಷ ಜನರ ಗಮನ ಸೆಳೆದಿವೆ.ಇಲ್ಲಿಯವರೆಗೂ ಜಾನಪದ ಸಾಹಿತ್ಯ, ಸಂಗೀತ ವಲಯದಲ್ಲಷ್ಟೇ ಪ್ರಸಿದ್ಧಿ ಪಡೆದಿದ್ದ ಮಹದೇವಸ್ವಾಮಿ ಈಗ ದಿಢೀರ್ ಸೆಲೆಬ್ರಿಟಿಯಾಗಿದ್ದಾರೆ.

## ಈಗ ಹೇಗಿದೆ ಅವರ ಬದುಕು?

‘ಅನ್ಯಾಯಕಾರಿ ಬ್ರಹ್ಮ’ ಗೀತೆ ಜನಪ್ರಿಯಗೊಂಡ ನಂತರ ಮಳವಳ್ಳಿ ಮಹದೇವಸ್ವಾಮಿ ಅವರ ಬದುಕು ಮೊದಲಿನಂತಿಲ್ಲ. ಕಾಲೇಜುಗಳ ಸಾಂಸ್ಕೃತಿಕ ಕಾರ್ಯಕ್ರಮಗಳು, ಯುವಜನೋತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಅವರು ಪ್ರಮುಖ ಆಕರ್ಷಣೆಯಾಗಿದ್ದಾರೆ. ಮನೆ ಬಾಗಿಲಿಗೆ ಕಾರು ಕಳುಹಿಸಿ, ಗೌರವಧನ ಕೊಟ್ಟು ಕರೆಸುವಂತಹ ಅವಕಾಶಗಳು ಬರುತ್ತಿವೆ. ಯುವಜನರು ಅವರ ಪಕ್ಕ ನಿಂತು ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದಾರೆ, ಆಟೊಗ್ರಾಫ್ ಪಡೆಯುತ್ತಿದ್ದಾರೆ.

ಸಿನಿಮಾ ನಿರ್ದೇಶಕರೊಬ್ಬರು ‘ಅನ್ಯಾಯಕಾರಿ ಬ್ರಹ್ಮ’ ಗೀತೆಯನ್ನು ತಮ್ಮ ಸಿನಿಮಾದಲ್ಲಿ ಹಾಡಬೇಕು ಎಂದು ಒಪ್ಪಂದ ಮಾಡಿಕೊಂಡು, ಮುಂಗಡ ಹಣವನ್ನೂ ಕೊಟ್ಟಿದ್ದಾರೆ. ‘ಬೇರೆ ಬೇರೆ ಸಿನಿಮಾಗಳಲ್ಲಿ ಹಾಡುವ, ನಟಿಸುವ ಅವಕಾಶಗಳೂ ಬರುತ್ತಿವೆ’ ಎನ್ನುವಾಗ ಮಹದೇವಸ್ವಾಮಿ ಅವರ ಮುಖಭಾವದಲ್ಲಿ ಅಚ್ಚರಿ ಇಣುಕುತ್ತದೆ.

ಹಿಂದೊಮ್ಮೆ ‘ಕಚ್ಚಾ ಬಾದಾಮ್’ ಜನಪದ ಗೀತೆಯ ಮೂಲಕ ಬೀದಿಯಲ್ಲಿ ಶೇಂಗಾ ಮಾರುತ್ತಿದ್ದ ಭೂಬನ್ ಬಂಡ್ಯಂಕರ್, ‘ತೇರಿ ಮೇರಿ’ ಗೀತೆಯ ಮೂಲಕ ರೈಲು ನಿಲ್ದಾಣದಲ್ಲಿ ಭಿಕ್ಷೆ ಬೇಡುತ್ತಿದ್ದ ರೋಣು ಮಂಡಲ್ ಕೂಡ ಸೆಲೆಬ್ರಿಟಿಗಳಾಗಿದ್ದರು. ಆದರೆ ನಂತರ ಇವರಿಬ್ಬರ ಬದುಕಿನಲ್ಲಿ ಅನಿರೀಕ್ಷಿತ ತಿರುವುಗಳು ಎದುರಾದವು, ಅವರ ಜನಪ್ರಿಯತೆ ಏರಿದಷ್ಟೇ ವೇಗವಾಗಿ ಕುಸಿಯಿತು. ಆದರೆ, ರೋಣ್ ಹಾಗೂ ಭೂಬನ್ ಅವರ ಉದಾಹರಣೆಗಳು ಮಳವಳ್ಳಿ ಮಹದೇವಸ್ವಾಮಿ ಅವರಿಗೆ ಹೊಂದುವುದಿಲ್ಲ. ಏಕೆಂದರೆ ಅವರ ಧ್ವನಿಯ ಹಿಂದೆ ಜನಪದ ಕಾವ್ಯಗಳ ಸೊಗಡಿದೆ, ಅವರ ಬದುಕೇ ಜನಪದವಾಗಿದೆ. ಅವರ ಸಾಧನೆಯ ಹಿಂದೆ ಅರ್ಧ ಶತಮಾನದ ಮಾರ್ಗವಿದೆ. ಈ ಎಲ್ಲ ಸಾಧನೆ–ಶ್ರಮದ ಹಿನ್ನೆಲೆಯಲ್ಲಿ ಮಹದೇವಸ್ವಾಮಿ ಅವರ ಇಂದಿನ ಯಶಸ್ಸನ್ನು ನೋಡಬೇಕಾಗಿದೆ.

ಮಹದೇವಸ್ವಾಮಿ ಅವರಿಗೂ ಮಲೆಮಹದೇಶ್ವರನಿಗೂ ಅನನ್ಯ ನಂಟು. ಅವರು ತಮ್ಮ ಬದುಕನ್ನು ಮಲೆಮಹದೇಶ್ವರನಿಗೆ ಅರ್ಪಿಸಿಕೊಂಡಿದ್ದಾರೆ. ಕಷ್ಟ, ಸುಖ, ನೋವು, ನಲಿವುಗಳನ್ನು ಮಹದೇಶ್ವರನ ಜೊತೆ ಹಂಚಿಕೊಳ್ಳುತ್ತಾರೆ. ಮಳವಳ್ಳಿಯಲ್ಲಿ ವಾಸಿಸುತ್ತಿದ್ದರೂ ತಮ್ಮ ಹೃದಯ ಮಲೆಮಹದೇಶ್ವರನ ಬೆಟ್ಟದ ಮೇಲೆಯೇ ಇರುತ್ತದೆ ಎನ್ನುತ್ತಾರೆ.

**‘ಅನ್ಯಾಯಕಾರಿ ಬ್ರಹ್ಮ’ ಹಾಡು ಹೊಸ ದನಿಯಲ್ಲೇನೂ ಮೂಡಿಬಂದಿಲ್ಲ. ಹಾಸ್ಟೆಲ್‌ನ ಹುಡುಗಿಯರ ಗುಂಪೊಂದು ಈ ಹಾಡಿಗೆ ತಮಗೆ ತಿಳಿದಂತೆ ಹೆಜ್ಜೆ ಹಾಕಿ, ಆ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದರಷ್ಟೇ... ಮುಂದಿನದು ಈಗ ಇತಿಹಾಸ.**

## ಸಮುದಾಯಗಳ ಬೆಸೆದ ಮಹದೇಶ್ವರ

ಮಹದೇವಸ್ವಾಮಿ ಅವರಿಗೆ ಜನಪದ ಗೀತೆಗಳು ಕಲೆ ಮಾತ್ರವೇ ಅಲ್ಲ, ಅನ್ನವೂ ಹೌದು. ಆರಂಭದಲ್ಲಿ ಅವರು ಮಳವಳ್ಳಿ ಬಸ್ ನಿಲ್ದಾಣದಲ್ಲಿ ಭಿಕ್ಷೆ ಮಾಡುತ್ತಿದ್ದರು. ನಂತರ ರೈತರ ಮನೆಗಳಿಗೆ ತೆರಳಿ, ರೈತ ಕುಟುಂಬಗಳ ಮಹಿಮೆಯನ್ನು ಜನಪದ ಗೀತೆಯೊಂದಿಗೆ ಸೇರಿಸಿ ಹಾಡುತ್ತಿದ್ದರು; ಕುಟುಂಬಗಳ ಮನೆದೇವರು, ಕುಲದೇವರುಗಳ ಬಗ್ಗೆ ಹಾಡು ಕಟ್ಟುತ್ತಿದ್ದರು. ಹೊತ್ತಿನ ಅನ್ನವನ್ನು ಹಾಡುಗಳೇ ಹುಟ್ಟಿಸಿಕೊಡುತ್ತಿದ್ದವು. ನಂತರ ಅವರ ಹಾಡಿನ ಪಯಣ ಹಳೇ ಮೈಸೂರು ಭಾಗದಲ್ಲಿ ಹರಡಿತು. ಮುಂದೆ ಕ್ಯಾಸೆಟ್, ಸಿ.ಡಿ., ವಿಡಿಯೊ ಗೀತೆಗಳ ಮೂಲಕ ಅವರ ಕೀರ್ತಿ ರಾಜ್ಯದೆಲ್ಲೆಡೆ ಸಾಗಿತು. ಒಂದು ಕಾಲದಲ್ಲಿ ರಾಜ್‌ಕುಮಾರ್, ವಿಷ್ಣುವರ್ಧನ್ ಚಲನಚಿತ್ರಗಳ ಧ್ವನಿಸುರುಳಿಗಳನ್ನೂ ಮೀರಿಸಿ ಅವರ ಕ್ಯಾಸೆಟ್‌ಗಳು ಮಾರಾಟವಾಗಿದ್ದವು. ರಾಜ್ಯದ ಎಲ್ಲಾ ಜಾತ್ರೆಗಳಲ್ಲೂ ಅವರ ಕ್ಯಾಸೆಟ್‌ಗಳು ಮಿಠಾಯಿಯಂತೆ ಮಾರಾಟವಾಗುತ್ತಿದ್ದವು.



‘ಅನ್ಯಾಯಕಾರಿ ಬ್ರಹ್ಮ’ ಗೀತೆಗೆ ಹೊಸ ತಾರುಣ್ಯ ನೀಡಿದ ತರುಣಿಯರ ನೃತ್ಯ

ಮಲೆಮಹದೇಶ್ವರನ ಪ್ರಭಾವದಿಂದಾಗಿ ಚಾಮರಾಜನಗರ, ಮೈಸೂರು ಹಾಗೂ ಮಂಡ್ಯ ಜಿಲ್ಲೆ ಸೇರಿದಂತೆ ಹಳೇ ಮೈಸೂರು ಭಾಗದಲ್ಲಿ ‘ಮನೆಗೊಬ್ಬರು ಮಹದೇವಸ್ವಾಮಿ’ಗಳಿದ್ದಾರೆ. ಈಗಲೂ ತಮ್ಮ ಮಕ್ಕಳಿಗೆ ಹುಟ್ಟಿನ ಹೆಸರಾಗಿ ಮಹದೇವ, ಮಹದೇವಸ್ವಾಮಿ ಎಂದೇ ನಾಮಕರಣ ಮಾಡುತ್ತಾರೆ. ಮಲೆಮಹದೇಶ್ವರ ಎಲ್ಲಾ ವರ್ಗಕ್ಕೂ ಆರಾಧ್ಯ. ಒಕ್ಕಲಿಗರಲ್ಲೇ ಮಹದೇವನ ಒಕ್ಕಲುಗಳಿವೆ. ದಲಿತರಲ್ಲಿ ಹೆಚ್ಚಿನವರು ಮಲೆಮಹದೇವನನ್ನೇ ಆರಾಧಿಸುತ್ತಾರೆ. ಲಿಂಗಾಯತರೂ ಮಹದೇಶ್ವರನಿಗೆ ನಡೆದುಕೊಳ್ಳುತ್ತಾರೆ.

ಮಲೆಮಹದೇಶ್ವರನ ಹೆಸರನ್ನೇ ಹೊಂದಿದ್ದ ಮಹದೇವಸ್ವಾಮಿ ತಮ್ಮ ಆರಾಧ್ಯ ದೈವದ ಬಗ್ಗೆ ಹಾಡುಕಟ್ಟುವಾಗ ಸಹಜವಾಗಿ ಅವರ ಗಾಯನ ಎಲ್ಲಾ ಸಮುದಾಯದವರಿಗೂ ಇಷ್ಟವಾಯಿತು. ತಮ್ಮ ಮನೆಗಳಿಗೆ ಆಹ್ವಾನಿಸಿ ರಾಗಿ, ಅಕ್ಕಿ, ಬೇಳೆ ಕೊಟ್ಟು ಹಾಡಿಸಿದರು. ಯಾರಾದರೂ ಸತ್ತಾಗ ಮೃತದೇಹದ ಮುಂದೆ ರಾತ್ರಿಯಿಡೀ ಮಲೆಮಹದೇಶ್ವರನೊಂದಿಗೆ ಮೃತರನ್ನು ಸಮೀಕರಿಸಿ ಹಾಡಿದರು. ತಿಥಿ ಮನೆಯಲ್ಲಿ ಮಹದೇವಸ್ವಾಮಿ ಮಾಡುವ ‘ಮಲೆಮಹದೇಶ್ವರ ಕಾವ್ಯದ’ ಕಥೆ ಮನೆಮಾತಾಯಿತು.

‘ಮಹದೇಶ್ವರಾ ದಯೆ ಬಾರದೇ’ ಎನ್ನುವುದು ಮಹದೇವಸ್ವಾಮಿ ಅವರಿಗೆ ಅಪಾರ ಜನಪ್ರಿಯತೆ ತಂದುಕೊಟ್ಟಿರುವ ಗೀತೆ. ಈ ಹಾಡಿನ ಹಿಂದೊಂದು ಕುತೂಹಲಕರ ಕಥೆಯಿದೆ. ಎಂ.ಎನ್. ವ್ಯಾಸರಾವ್ ಅವರ ‘ನೀನಿಲ್ಲದೇ ನನಗೇನಿದೆ’ ಭಾವಗೀತೆ, ಸಿ.ಅಶ್ವಥ್ ಸಂಗೀತ ಸಂಯೋಜನೆ ಹಾಗೂ ಎಂ.ಡಿ. ಪಲ್ಲವಿ ಕಂಠದಲ್ಲಿ ಜನಪ್ರಿಯಗೊಂಡಿರುವುದು ಸರಿಯಷ್ಟೆ. ಈ ಗೀತೆಗೆ ಮರುಳಾದ ಮಹದೇವಸ್ವಾಮಿ, ಅದೇ ಟ್ಯೂನ್ ಬಳಸಿಕೊಂಡು, ಜನಪದ ಗೀತೆಯೊಂದನ್ನು ಹಾಡಿದರು. ವಿಡಿಯೊ ಚಿತ್ರೀಕರಣವನ್ನೂ ಮಾಡಿದರು. ಅದುವೇ ‘ಮಹದೇಶ್ವರಾ ದಯೆ ಬಾರದೇ’.

ಮಹದೇವಸ್ವಾಮಿ ಅವರ ‘ಮಹದೇಶ್ವರಾ ದಯೆ ಬಾರದೇ’ ಗೀತೆ ರಾಜ್ಯದಲ್ಲಿ ಸೃಷ್ಟಿಸಿದ ಅಬ್ಬರ ಅಷ್ಟಿಷ್ಟಲ್ಲ. ಹಾದಿ ಬೀದಿಯಲ್ಲಿ, ಮನೆಗಳಲ್ಲಿ, ದೇವಾಲಯಗಳಲ್ಲಿ ಇದೇ ಹಾಡು ಮೊಳಗಲು ಆರಂಭವಾಯಿತು. ಈಗಲೂ ಅದರ ಪ್ರಸಿದ್ಧಿ ಕಡಿಮೆಯಾಗಿಲ್ಲ. ಈ ಹಾಡಿನ ಕ್ಯಾಸೆಟ್, ಸಿ.ಡಿ. ಮಾರಾಟ ರಾಜ್ಯದಲ್ಲಿ ಹೊಸ ದಾಖಲೆಯನ್ನೇ ಸೃಷ್ಟಿ ಮಾಡಿತು. ಮೂಲ ಭಾವಗೀತೆಯನ್ನು ಮೀರಿ ಮಹದೇಶ್ವರ ಗೀತೆ ಪ್ರಸಿದ್ಧಿ ಪಡೆಯಿತು. ಮಹದೇವಸ್ವಾಮಿ ಅವರು ತಮ್ಮ ಜೀವನದಲ್ಲಿ ಹೆಚ್ಚು ಹಣ ಕಂಡಿದ್ದು ಈ ಕ್ಯಾಸೆಟ್ ಮೂಲಕವೇ. ಇದೆಲ್ಲ ಬೆಳವಣಿಗೆ ಗಮನಿಸಿದ ಸಿ. ಅಶ್ವಥ್ ಸಹಜವಾಗಿಯೇ ಕಸಿವಿಸಿಗೊಂಡರು. ಪ್ರಕರಣ ದಾಖಲಿಸುವ ಬಗ್ಗೆ ಹೇಳಿಕೆ ಕೊಟ್ಟರು. ಆದರೆ, ಮಹದೇವಸ್ವಾಮಿ ಅವರ ಬಡತನದ ಬದುಕು, ಅವರು ನಡೆದು ಬಂದ ಜನಪದ ಹಾದಿಯನ್ನು ತಿಳಿದು ಸುಮ್ಮನಾದರು. ಹಾಡೊಂದು, ಕಲಾವಿದರ ಮನಸ್ಸುಗಳನ್ನು ಬೆಸೆದಿತ್ತು.